**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1**

ಸಿ4(7)ಪ್ರಾ.ಶಾ.ಶಿ ವರ್ಗ/55/2011-12. ದಿನಾಂಕ: 05.05.2011

**ಸಾಂದರ್ಭಿಕವಾಗಿ ಶಿಕ್ಷಕರು ಕೇಳುವ ಪ್ರಶ್ನೆಗಳಿಗೆ ಸ್ಪಷ್ಟೀಕರಣ**

| ಕ್ರ.ಸಂ | ಪ್ರಶ್ನೆ | ಸ್ಪಷ್ಟೀಕರಣ |
|---|---|---|
| 1 | ಖಾಯಂ ಪೂರ್ವ ಅವಧಿ ಘೋಷಣೆಯಾಗಿದೆ. ಮೊದಲ ಬಾರಿಗೆ ವರ್ಗಾವಣೆಗೆ ಅರ್ಜಿ ಸಲ್ಲಿಸುತ್ತಿದ್ದೇವೆ. ವರ್ಗಾವಣೆಗೆ ಅವಕಾಶ ಇದೆಯೇ | • ಹೌದು.<br>• ಖಾಯಂ ಪೂರ್ವ ಅವಧಿ ಘೋಷಣೆಯಾಗಿದ್ದಲ್ಲಿ ಘಟಕದ ಒಳಗೆ ವರ್ಗಾವಣೆಗೆ ಅವಕಾಶ ಇದೆ.<br>• ಪರಸ್ಪರ, ತೀವ್ರತರ ಖಾಯಿಲೆ, ಅಂಗವಿಕಲ, ಸೈನಿಕ ಪ್ರಕರಣ, ವಿಧವಾ ಪ್ರಕರಣ, ಶಿಕ್ಷಕರ ಸಂಘ, ಈ ಪ್ರಕರಣಗಳಲ್ಲಿ ಘಟಕದ ಹೊರಗೆ ವರ್ಗಾವಣೆಗೆ ಅವಕಾಶ ಇದೆ. |
| 2 | ಪರಸ್ಪರ ವರ್ಗಾವಣೆ ಸೇರಿದಂತೆ ಯಾವುದೇ ವರ್ಗಾವಣೆಗೆ ಅರ್ಜಿ ಹಾಕಲು 3 ವರ್ಷ ಸೇವಾ ನಿಲುಗಡೆ ಹೊಂದಿರಬೇಕೇ: | ಇಲ್ಲ. ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಶಿಕ್ಷಕರ ವರ್ಗಾವಣಾ ನಿಯಂತ್ರಣ) ನಿಯಮಗಳು 2007 ರ 15 ನೇ ನಿಯಮದಡಿ ಒಮ್ಮೆ ವರ್ಗಾವಣೆಗೊಂಡು ಬಿಡುಗಡೆಯಾದ ಶಿಕ್ಷಕರು ಮಾತ್ರ ವರ್ಗಾವಣೆಗೆ ಅರ್ಜಿ ಸಲ್ಲಿಸಬಯಸಿದಲ್ಲಿ ಅವರು ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಸ್ಥಳದಲ್ಲಿನ ನಿಲುಗಡೆ ಅವಧಿ ಕನಿಷ್ಠ ಮೂರು ವರ್ಷ ಪೂರೈಸಿರತಕ್ಕದ್ದು. ಇದು ಪರಸ್ಪರ ವರ್ಗಾವಣೆ ಸೇರಿದಂತೆ ಎಲ್ಲಾ ಪ್ರಕರಣಗಳಿಗೂ ಅನ್ವಯಿಸುತ್ತದೆ. |
| 3 | ಪತಿ-ಪತ್ನಿ ಪ್ರಕರಣದಲ್ಲಿ 3 ವರ್ಷ ಸೇವೆ ಕಡ್ಡಾಯವೇ: | ಅಂತರ ಘಟಕ ವರ್ಗಾವಣೆ ಸಂದರ್ಭದಲ್ಲಿ 03 ವರ್ಷ ಸೇವೆ ಸಲ್ಲಿಸುವುದು ಕಡ್ಡಾಯವಾಗಿದೆ. [2007 ರ ನಿಯಮ 6(2)(1)] |
| 4 | ಪತಿ-ಪತ್ನಿ ಪ್ರಕರಣದ ವರ್ಗಾವಣೆಯಲ್ಲಿ ವಾಸಸ್ಥಳ ಪ್ರಮಾಣ ಪತ್ರ ಯಾರಿಂದ ಪಡೆದುಕೊಳ್ಳಬೇಕು. | • ಪತಿ-ಪತ್ನಿ ಇಬ್ಬರೂ ಸರ್ಕಾರಿ, ಅರೆಸರ್ಕಾರಿ, ಅನುದಾನಿತ ಸಂಸ್ಥೆ ನೌಕರರಾಗಿದ್ದಲ್ಲಿ ಸೇವಾ ಪ್ರಮಾಣ ಪತ್ರ ನೀಡುವುದು.<br>• ಅನುದಾನರಹಿತ ಸಂಸ್ಥೆ ನೌಕರರು, ಕಾರ್ಖಾನೆ ಮುಂತಾದ ಖಾಸಗಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವವರು ಸೇವಾ ಪ್ರಮಾಣ ಪತ್ರದ ಜೊತೆಗೆ ವೇತನ ಪ್ರಮಾಣ ಪತ್ರ ನೀಡುವುದು.<br>• ಪತಿ ಅಥವಾ ಪತ್ನಿಯರಲ್ಲಿ ಒಬ್ಬರು ಸರ್ಕಾರಿ ನೌಕರರಾಗಿಲ್ಲದೆ ಇದ್ದಲ್ಲಿ ಅವರ ವಾಸಸ್ಥಳದ ಬಗ್ಗೆ ಚುನಾವಣಾ ಆಯೋಗ ಮತದಾನಕ್ಕಾಗಿ ನಿರ್ದಿಷ್ಟಪಡಿಸಿದ ದಾಖಲೆ ಅಥವಾ ಗ್ರಾಮ ಪಂಚಾಯಿತಿ, ಪುರಸಭೆ, ನಗರಸಭೆಗಳು ನೀಡುವ ವಾಸಸ್ಥಳ ದೃಢೀಕರಣ ಪತ್ರ ನೀಡುವುದು. |
| 5 | ಘಟಕದ ಹೊರಗೆ ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಲು ಸಾಮಾನ್ಯ ಪ್ರಕರಣದಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರಬೇಕು. | • ದಿನಾಂಕ: 04.05.2005 ಕ್ಕೆ 5 ವರ್ಷ ಸೇವೆ ಪೂರ್ಣಗೊಳಿಸಿರಬೇಕು.<br>• ವಿಶೇಷ ಪ್ರಕರಣಗಳಿಗೆ ವರ್ಗಾವಣೆ ನಿಯಮ 2007 ರ 6ನೇ ನಿಯಮ ನೋಡಿ |

| | | |
|---|---|---|
| 6 | ಘಟಕದ ಹೊರಗೆ ಒಂದು ಬಾರಿ ವರ್ಗಾವಣೆ ಹೊಂದಿದ ನಂತರ ಪುನಃ ಘಟಕದ ಹೊರಗೆ ವರ್ಗಾವಣೆ ಕೋರಲು ಅವಕಾಶ ಇದೆಯೇ | ಇಲ್ಲ. |
| 7 | ನನ್ನ ಪತಿ ರೈತರಾಗಿದ್ದಾರೆ: ನನ್ನ ಸಹೋದ್ಯೋಗಿ ಶಿಕ್ಷಕರ ಪತಿ ಮೆಕಾನಿಕ್ ಆಗಿದ್ದು, ಬೇರೆ ಜಿಲ್ಲೆಯಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ಪತಿ ಪತ್ನಿ ಪ್ರಕರಣದಲ್ಲಿ ವರ್ಗಾವಣೆ ಕೋರಬಹುದೇ: | ಕೋರಬಹುದು. |
| 8 | ನನಗೆ 2 ವರ್ಷ ಸೇವೆ ಮುಗಿದಿದೆ: ಆದರೆ, ಖಾಯಂ ಪೂರ್ವ ಅವಧಿ ಘೋಷಿಸಿಲ್ಲ. ನಾನು ವರ್ಗಾವಣೆಗೆ ಅರ್ಜಿ ಸಲ್ಲಿಸಬಹುದೆ; | ಇಲ್ಲ. |
| 9 | ನಾನು ತೀವ್ರತರ ಖಾಯಿಲೆ ಪ್ರಕರಣದಲ್ಲಿ ಅರ್ಜಿ ಸಲ್ಲಿಸಿರುತ್ತೇನೆ. ವೈದ್ಯಕೀಯ ಪ್ರಮಾಣ ಪತ್ರ ಯಾರಿಂದ ಪಡೆದುಕೊಳ್ಳಬೇಕು. | ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರ ಪಡೆದುಕೊಳ್ಳಬೇಕು. |
| 10 | ನನಗೆ ಸ್ಥಳಾಂತರ ಪ್ರಕ್ರಿಯೆಯಲ್ಲಿ ಬೇರೆ ಶಾಲೆಗೆ ಸ್ಥಳ ನಿಯುಕ್ತಿಯಾಗಿದೆ. ವರ್ಗಾವಣೆಗೆ ಅರ್ಜಿ ಸಲ್ಲಿಸಬಹುದೆ; | ನಿಯುಕ್ತಿಗೊಂಡ ಸ್ಥಳದಲ್ಲಿ ಹಾಜರಾಗಿದ್ದರೆ ಮಾತ್ರ ಅರ್ಜಿ ಸಲ್ಲಿಸಬಹುದು |
| 11 | ಸದರಿ ಸಾಲಿನಲ್ಲಿ ಪ್ರಾಥಮಿಕ ಶಾಲೆಯಿಂದ ಬಡ್ತಿ ಪಡೆದು ಪ್ರೌಢಶಾಲಾ ಶಿಕ್ಷಕನಾಗಿದ್ದೇನೆ. ನಾನು ವರ್ಗಾವಣೆಗೆ ಅರ್ಜಿ ಸಲ್ಲಿಸಬಹುದೆ; | ಸಲ್ಲಿಸಬಹುದು |
| 12 | ಹೊಸದಾಗಿ ನೇಮಕಗೊಂಡ ಶಿಕ್ಷಕರಿಗೆ 'ಸಿ' ವಲಯದ ಶಾಲೆಗಳಲ್ಲಿ ನೇಮಕಾತಿ ಮಾಡುವ ಉದ್ದೇಶದಿಂದ ಕೆಲವು ಶಿಕ್ಷಕರನ್ನು 'ಎ' ಮತ್ತು 'ಬಿ' ವಲಯದ ಶಾಲೆಗಳಿಗೆ ಅವರ ಇಚ್ಛೆಯಂತೆ ಸ್ಥಳ ನಿಯುಕ್ತಿ ಮಾಡಲಾಗಿದೆ. ಅಂತಹ ಶಿಕ್ಷಕರು ವರ್ಗಾವಣೆಗೆ ಅರ್ಜಿ ಸಲ್ಲಿಸಬಹುದೆ; | ಅರ್ಜಿ ಸಲ್ಲಿಸಬಹುದು |
| 13 | ತೀವ್ರತರ ಖಾಯಿಲೆ ಪ್ರಕರಣದಲ್ಲಿ ತಂದೆ ತಾಯಿಯವರಿಗೆ ತೀವ್ರತರ ಖಾಯಿಲೆ ಇದ್ದಲ್ಲಿ, ವರ್ಗಾವಣೆಗೆ ಪರಿಗಣಿಸುವಿರಾ; | ವರ್ಗಾವಣೆಯಲ್ಲಿ ಕುಟುಂಬ ಎಂದರೆ ನೌಕರ, ನೌಕರರ ಪತಿ/ಪತ್ನಿ ಮತ್ತು ಮಕ್ಕಳು ಬರುತ್ತಾರೆ. ತಂದೆ ತಾಯಿಯವರು ಕುಟುಂಬದ ವ್ಯಾಪ್ತಿಗೆ ಬರುವುದಿಲ್ಲ. ಆದ ಕಾರಣ ತಂದೆ ತಾಯಿಯವರಿಗೆ ತೀವ್ರತರ ಖಾಯಿಲೆ ಇದ್ದಲ್ಲಿ, ಈ ಪ್ರಕರಣದಡಿ ಆದ್ಯತೆ ಕೋರಿ ಅರ್ಜಿ ಹಾಕುವಂತಿಲ್ಲ. |

05-05-11

(ಪಿ.ದೇವಪ್ರಕಾಶ್)
ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

(ಕೆ.ಪಿ.ಹನುಮಂತರಾಯಪ್ಪ)
ನಿರ್ದೇಶಕರು (ಪ್ರೌಢಶಿಕ್ಷಣ)

\\Typing3server\d\E\EST4\Mamatha\LOKESH\Transfer-2011.doc